ಶ್ರೀ ಎನ್. ಸಂಪಂಗಿ : ಮಾನ್ಯ ಅಧ್ಯಕ್ಷರೆ, ನೀವು ಹೇಳುವುದು ಗುಡಿಬಂಡೆದು ಆಯಿತು. ಆದರೆ ಬಾಗೇಪಲ್ಲಿಗೆ ಹಿಂದೆ ಇರುವ ಯುವಜನ ಸೇವ ಕ್ರೀಡಾ ಇಲಾಖೆಯ ಸಚಿವರು ದುಡ್ಡು ಬಿಡುಗಡೆಯ ಮಾಡುವ ಬಗ್ಗೆ ಹೇಳಿದರು. ಯಾವ ಮಂತ್ರಿಗಳು ಹೇಳುತ್ತಾರೆ, ಅವರು ಆ ಇಲಾಖೆಯಿಂದ ಹೊರಟು ಹೋದರು. ಇವತ್ತು ನೀವು ಹೇಳುತ್ತಿದ್ದೀರಿ, ನಾಳೆ ಇನ್ನೂ ಯಾರು ಬರುತ್ತಾರೆ ಎನ್ನುವ ಬಗ್ಗೆ ಅನುಮಾನ ಇದೆ. ನೀವು ಕೂಡಲೇ ಹಣ ಬಿಡುಗಡೆ ಮಾಡಿ ಆ ಕ್ರೀಡಾಂಗಣಗಳನ್ನು ಪೂರ್ತಿ ಮಾಡಿ ಕೊಡಿ. ಸಚಿವರು ಬದಲಾವಣೆ ಆಗುವುದಿಲ್ಲವೆಂದರೆ ನೀವೇ ಹಣ ಬಿಡುಗಡೆ ಮಾಡಿ ಮಾಡಿ ಕೊಡಿ.

ಶ್ರೀ ಎಂ. ಪಿ. ಅಪ್ಪಚ್ಚು (ರಂಜನ್) : ಮಾನ್ಯ ಅಧ್ಯಕ್ಷರೆ, ತಾವು ಕೇಳಿರುವುದು ಗುಡಿಬಂಡೆಗೆ ಆದರೂ ಕೂಡ ನಾನು ಇಷ್ಟು ಉತ್ತರವನ್ನು ಕೊಟ್ಟಿದ್ದೇನೆ. ನೀವು ಇನ್ನೂ ಪ್ರಶ್ನೆ ಕೇಳಿದರೆ ಮುಂದಿನ ದಿವಸಗಳಲ್ಲಿ ನಾನು ಕ್ರಮ ತೆಗೆದುಕೊಳ್ಳುವುದಕ್ಕೆ ವ್ಯವಸ್ಥೆ ಮಾಡುತ್ತೇನೆ. ಈಗಾಗಲೇ ಬಾಗೇಪಲ್ಲಿ ಕ್ರೀಡಾಂಗಣಕ್ಕೆ 40 ಲಕ್ಷ ರೂ.ಗಳನ್ನು ಬಿಡುಗಡೆ ಮಾಡಿರುತ್ತೇವೆ. ಕ್ರೀಡಾಂಗಣದ ಕೆಲಸ ಕೂಡ ಪ್ರಗತಿ ಪಥದಲ್ಲಿನಡೆಯುತ್ತಿದೆ.

ಶ್ರೀ ಎನ್. ಸಂಪಂಗಿ : ಹಣ ಬಿಡುಗಡೆ ಮಾಡಿ ಆ ಕ್ರೀಡಾಂಗಣವನ್ನು ಯಾವಾಗ ಪೂರ್ತಿ ಮಾಡಿಕೊಡುತ್ತೀರೆಂದು ನಾನು ಕೇಳುತ್ತಿದ್ದೇನೆ.

(ಗೊಂದಲ)

ಅಧ್ಯಕ್ಷರು : ಈಗ ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು, ಮಧ್ಯದಲ್ಲಿ ಯಾರೂ ಮಾತನಾಡುವಂತಿಲ್ಲ, ಕುಳಿತುಕೊಳ್ಳಿ. ಮಾನ್ಯ ಸಚಿವರು ಹೇಳಿ.

ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ಎಸ್.ಸುರೇಶ್ ಕುಮಾರ್ (ನಗರಾಭಿವೃದ್ಧಿ, ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಅಧ್ಯಕ್ಷರೆ, ದಿನಾಂಕ 11.12.2012ರ 5ನೇ ಪಟ್ಟಿಯಿಂದ ಲಿಖಿತ ಮೂಲಕ ಉತ್ತರಿಸುವ 146

ಪ್ರಶ್ನೆಗಳ ಪೈಕಿ 108 ಪ್ರಶ್ನೆಗಳ ಉತ್ತರಗಳನ್ನು ಹಾಗೂ ದಿನಾಂಕ 06.12.2012ರ 2ನೇ ಪಟ್ಟಿಯಿಂದ ಸದನದಲ್ಲಿ ಉತ್ತರಿಸುವ 15 ಪ್ರಶ್ನೆಗಳ ಪೈಕಿ 14 ಪ್ರಶ್ನೆಗಳ ಉತ್ತರಗಳನ್ನು ಹಾಗೂ ಲಿಖಿತ ಮೂಲಕ ಉತ್ತರಿಸುವ 78 ಪ್ರಶ್ನೆಗಳ ಪೈಕಿ 60 ಪ್ರಶ್ನೆಗಳ ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

(ಅನುಬಂಧ–1) (ಭಾಗ–11)

6. ವಿತ್ತೀಯ ಕಾರ್ಯಕಲಾಪಗಳು

ಶ್ರೀ ಎಸ್. ಸುರೇಶ್ ಕುಮಾರ್ (ಮಾನ್ಯ ಮುಖ್ಯಮಂತ್ರಿಯವರ ಪರವಾಗಿ) : ಮಾನ್ಯ ಅಧ್ಯಕ್ಷರೆ, 2012–13ನೇ ಸಾಲಿನ ರಾಜ್ಯ ಹಣಕಾಸಿನ ಮಧ್ಯಮಾವಧಿ ಪರಿಶೀಲನಾ ವರದಿಯನ್ನು ಮಂಡಿಸುತ್ತಿದ್ದೇನೆ.

ಅಧ್ಯಕ್ಷರು: ಮಂಡಿಸಲಾಯಿತು.

7. ವರದಿಯನ್ನೊಪಿಸುವುದು

ಶ್ರೀ ಎನ್. ಯೋಗಿಶ್ ಭಟ್. (ಉಪ ಸಭಾಧ್ಯಕ್ಷರು ಹಾಗೂ ಅಧ್ಯಕ್ಷರು, ಅರ್ಜಿಗಳ ಸಮಿತಿ) : ಮಾನ್ಯ ಅಧ್ಯಕ್ಷರೆ, ಕರ್ನಾಟಕ ವಿಧಾನಭೆಯ 2011–12ನೇ ಸಾಲಿನ ಅರ್ಜಿಗಳ ಸಮಿತಿಯು ತಯಾರಿಸಿದ 16ನೇ ವರದಿಯನ್ನು ಈ ಅಧಿವೇಶದಲ್ಲಿ ಸಮಿತಿಯ ಪರವಾಗಿ ನಾನು ಸದನಕ್ಕೆ ಒಪ್ಪಿಸುತ್ತಿದ್ದೇನೆ.

ಅಧ್ಯಕ್ಷರು : ಮಂಡಿಸಲಾಯಿತು.

8. ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು

1. ವಿಷಯ : ಹೊಸದುರ್ಗ ನಗರದಲ್ಲಿ ಡಿಪ್ಲೊಮಾ ಕಾಲೇಜಿಗೆ ಸರ್ಕಾರಿ ಜಾಗ ಕೊಡುವ ಬಗ್ಗೆ.

ಶ್ರೀ ಗೂಳಿಹಟ್ಟಿ ಡಿ. ಶೇಖರ್ (ಹೊಸದುರ್ಗ) : ಮಾನ್ಯ ಅಧ್ಯಕ್ಷರೆ, ನನ್ನ ಮತಕ್ಷೇತ್ರವಾದ ಹೊಸದುರ್ಗ ನಗರದಲ್ಲಿ ಕುಮಾರನ್ ಕಣಿವೆ ಎಂಬ ಡಿಪ್ಲೊಮಾ ಕಾಲೇಜಿಗೆ ಸರ್ಕಾರಿ ಜಾಗದಲ್ಲಿ ಜಾಗ ಕೇಳಿದ್ದೆವು ಆದರೆ ಬೇರೆಯವರಿಗೆ ಅನಧಿಕೃತವಾಗಿ ದಾಖಲೆ ಮಾಡಿಕೊಂಡು ಕೋಟ್ಯಂತರ ರೂಪಾಯಿ ಬೆಲೆ ಬಾಳುವಂತಹ ಜಾಗಗಳನ್ನು ಕಬಳಿಕೆ ಮಾಡಿಕೊಳ್ಳುವುದಕ್ಕೆ